(ಗೊಂದಲ)

ಆದರೆ, ಆಪಾದನೆಗಳನ್ನು ಮಾಡುವಾಗ ಸತ್ಯಾಸತ್ಯತೆ ಯೋಚನೆ ಮಾಡಬೇಕಾಗುತ್ತದೆ. ಗುಣಮಟ್ಟ ಸರಿ ಇಲ್ಲ, ಕೆಲಸ ಸರಿ ಇಲ್ಲ ಎಂದರೆ ಎನ್‌ಕ್ವೈರಿ ಮಾಡಲಿ. ಮಾಗಡಿ ರಸ್ತೆಗೆ ಹೋಗೋಣ, ಕಾಡು ರಸ್ತೆಗೆ ಹೋಗೋಣ ಎಲ್ಲೆಲ್ಲಿ ಎಂಎಲ್‌ಎಗಳು ಕಾರ್ಪೊರೇಟರ್‌ಗಳು ಇದ್ದಾರೆ ನಮ್ಮ ಜವಾಬ್ದಾರಿ ಕೂಡ ಇದೆ. ಕೆಲಸಕಾರ್ಯಗಳು ಮಾಡುವಾಗ ನಾವು ನೋಡುವ ಅವಶ್ಯಕತೆ ಇದೆ. ಎರಡೂವರೆ ಕಿ.ಮೀ. ಮಾಗಡಿ ರಸ್ತೆ ನೋಡಿ ಎಷ್ಟು ಚೆನ್ನಾಗಿದೆ. ಬೆಂಗಳೂರು ನಗರದಲ್ಲಿ ಆಗತಕ್ಕಂತಹ ಕೆಲಸ ಕಾರ್ಯಗಳಿಗೆ ಮುಖ್ಯಮಂತ್ರಿಗಳು ಉತ್ತೇಜನ ಕೊಡುತ್ತಿದ್ದಾರೆ. ಅದಕ್ಕೆ ನಾವು ಸಹಕಾರ ಕೊಡಬೇಕು.

(ಗೊಂದಲ)

ಅಧ್ಯಕ್ಷರು : ನೀವು ಬೇರೆ ನೋಟೀಸ್ ಕೊಡಿ ಅರ್ಧ ಗಂಟೆ ಚರ್ಚೆಗೆ ಹಾಕೋಣ. ಸುಬ್ಬಾರೆಡ್ಡಿಯವರೆ ತಾವು ಬುದ್ಧಿವಂತರು ದಯವಿಟ್ಟು ಕುಳಿತುಕೊಳ್ಳಿ. I will allow you on some other time. I have called the next question.

ಮಾಚೇನಹಳ್ಳಿಯ ಕೈಗಾರಿಕಾ ವಸಾಹತು

511 - ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ತಾಲ್ಲೂಕು ಮಾಚೇನಹಳ್ಳಿಯಲ್ಲಿರುವ ಕೈಗಾರಿಕೆಗಳೆಷ್ಟು? ಇವುಗಳಿಗೆ ನೀರು ಪೂರೈಸಲು ಆಗುತ್ತಿರುವ ವ್ಯಯವೆಷ್ಟು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಶಿವಮೊಗ್ಗ ತಾಲ್ಲೂಕು ಮಾಚೇನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಒಟ್ಟು 89 ಕೈಗಾರಿಕಾ ಉದ್ದಿಮೆಗಳಿವೆ. ಸದರಿ ಕೈಗಾರಿಕಾ ಉದ್ದಿಮೆಗಳಿಗೆ ನೀರು ಪೂರೈಕೆಗಾಗಿ ತಿಂಗಳಿಗೆ ಸರಾಸರಿ ರೂ. 7,500.00 ಗಳು ವ್ಯಯವಾಗುತ್ತಿದೆ.

ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು 89 ಕೈಗಾರಿಕೋದ್ದಿಮೆಗಳು ಕೆಲಸ ಮಾಡುತ್ತಿವೆ ಎಂದು ಹೇಳಿದ್ದಾರೆ. ನನಗೆ ಗೊತ್ತಿರುವ ಹಾಗೆ ಕೇವಲ 44 ಉದ್ದಿಮೆಗಳು ಕೆಲಸ ಮಾಡುತ್ತಿವೆ. ಅದಕ್ಕೆ ಕಾರಣ ಅಲ್ಲಿ ನೀರಿನ ಅಭಾವವಿದೆ. ಮಾಚೇನಹಳ್ಳಿ ಶಿವಮೊಗ್ಗ ಮತ್ತು ಭದ್ರಾವತಿ ಮಧ್ಯದಲ್ಲಿರತಕ್ಕಂತಹ ಜಾಗ. ಭದ್ರಾ ನದಿಯಿಂದ ನೀರಿನ ಅನುಕೂಲತೆ ಕೊಟ್ಟರೆ ಮಾತ್ರ ಆ ಭಾಗ ಉತ್ತಮವಾಗಿ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಮಲೆನಾಡು ಪ್ರದೇಶಗಳಿಗೆ ಈ ಶೋಭೆ ತಂದ ಹಾಗಾಗುತ್ತದೆ. ಮತ್ತು ಆ ಭಾಗ ಬೆಳವಣಿಗೆಯಾಗುತ್ತದೆ. ಮಲೆನಾಡು ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಇರುವ ಮಾಹಿತಿ ಪ್ರಕಾರ 69 ಕೈಗಾರಿಕೆಗಳು ಅಲ್ಲಿ ಇವೆ. 12 ಬೋರ್‌ವೆಲ್‌ಗಳಿವೆ, ಈಗಾಗಲೇ 8 ಬೋರ್‌ವೆಲ್‌ಗಳು ಕೆಲಸ ಮಾಡುತ್ತಿವೆ. ನಾವು ಪ್ರತಿ ದಿನ 52 ಕಿ.ಲೀಟರ್ ನೀರು ಕೊಡುತ್ತಿದ್ದೇವೆ. ಆದರೆ ಸದಸ್ಯರು ಏನು ಹೇಳುತ್ತಿದ್ದಾರೆ, ಅಲ್ಲಿ ನಮ್ಮ ಭದ್ರಾ ನದಿಯಿಂದ ವಾಟರ್ ಸಪ್ಲೈ ಸ್ಕೀಮ್ ಮಾಡಿ ನೀರು ಸಪ್ಲೈ ಮಾಡುವುದು ಒಳ್ಳೆಯ ಸಲಹೆ, ಈಗಾಗಲೇ ಅದು ಕೆಐಡಿಬಿ ಪರಿಗಣಿಸುತ್ತಿದೆ, ಆದಷ್ಟು ಬೇಗ ಈ ಸ್ಕೀಮ್ ಇಂಪ್ಲಿಮೆಂಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇದರ ಅಂದಾಜುವೆಚ್ಚ ಆರು ಕೋಟಿ ರೂಪಾಯಿಯಾಗುತ್ತದೆ. ಅಲ್ಲಿ ಪುನಃ ಕೈಗಾರಿಕೆ ಬೆಳೆಯುವುದಕ್ಕೆ ಸಾಕಷ್ಟು ಅವಕಾಶ ಇದೆ. ಎರಡನೇ ಹಂತದಲ್ಲಿ 400 ಎಕರೆ ಭೂಮಿ ಅಕ್ವೈರ್ ಮಾಡಬೇಕೆಂದು ಕೆಐಡಿಬಿಯಲ್ಲಿ ಪ್ರಸ್ತಾವನೆ ಇದೆ.

ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ : ಬೋರ್‌ವೆಲ್ ನೀರಿನಲ್ಲಿ ಇಂಡಸ್ಟ್ರೀ ಮಾಡುವುದಕ್ಕಾಗುವುದಿಲ್ಲ. ದಯವಿಟ್ಟು ಇದನ್ನು ಆದಷ್ಟು ಬೇಗ ಮಾಡಿಕೊಡಬೇಕು.

ಶ್ರೀ ಆರ್.ವಿ. ದೇಶಪಾಂಡೆ : ನಾವು ಸ್ಕೀಮ್ ರೆಡಿ ಮಾಡಿದ್ದೇವೆಂದು ಹೇಳಿದ್ದೇನೆ.

ರಾಜ್ಯದಲ್ಲಿ ಕೈಗಾರಿಕೆಗಳಿಲ್ಲದ ಪ್ರದೇಶಗಳ ಬಗ್ಗೆ

515 - ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಕೈಗಾರಿಕೆಗಳು ಇಲ್ಲದ ಪ್ರದೇಶಗಳು ಯಾವುವು? (ಜಿಲ್ಲಾವಾರು ಮಾಹಿತಿ ನೀಡುವುದು)*

ಆ) *ಕೈಗಾರಿಕೆ ಇಲ್ಲದ ಪ್ರದೇಶಗಳಲ್ಲಿ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಿ, ಆ ಪ್ರದೇಶಗಳ ಅಭಿವೃದ್ಧಿಗೆ ಸರ್ಕಾರ ಉದ್ದೇಶಿಸಿದೆಯೇ, ಇದರ ರೂಪುರೇಷೆಗಳೇನು?*

ಇ) *ಕಳೆದ 3 ವರ್ಷಗಳಲ್ಲಿ ಇದಕ್ಕಾಗಿ ಮೀಸಲಿಟ್ಟ ಹಣ ಎಷ್ಟು ಮತ್ತು ಅಭಿವೃದ್ಧಿಗಾಗಿ ಖರ್ಚು ಮಾಡಲಾದ ಹಣ ಎಷ್ಟು?*

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲಾಗಿದೆ.

ಆ) ಎಲ್ಲಾ ಜಿಲ್ಲೆಗಳಲ್ಲಿ ಬಾಕಿ ಉಳಿದ ಕೈಗಾರಿಕಾಭಿವೃದ್ಧಿಗಾಗಿ ಸರ್ಕಾರವು ನಿಯತವಾಗಿ ಕೈಗಾರಿಕಾ ನೀತಿಗಳನ್ನು ಪ್ರಕಟಿಸುತ್ತಿದೆ.

ಇ) ಜಿಲ್ಲಾವಾರು ರಾಜ್ಯ ಸಹಾಯಧನ ಬಿಡುಗಡೆ ಮಾಡಿರುವ ಪಟ್ಟಿ ಲಗತ್ತಿಸಲಾಗಿದೆ.